NS – 021

B.Com. 28

III ಸೆಮಿಸ್ಟರ್ ಬಿ.ಕಾಂ. ಪರೀಕ್ಷೆ, ನವೆಂಬರ್/ಡಿಸೆಂಬರ್ 2016

(ರಿಪೀಟರ್ಸ್) (2012-13 and Onwards)

Repeaters ಕನ್ನಡ ಭಾಷಾಪತ್ರಿಕೆ – III

ಸಾಹಿತ್ಯ ಸಲ್ಲಾಪ – ೨ ಮತ್ತು ವ್ಯಾವಹಾರಿಕ ಕನ್ನಡ

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 100

ST. CLARET COLLEGE LIBRARY

ಭಾಗ – 1

ಸಾಹಿತ್ಯ ಸಲ್ಲಾಪ – ೨

I. ಈ ಪದ್ಯದ ಭಾವಾರ್ಥ ಬರೆಯಿರಿ : (1×5=5)

..... ಹೌದು ಸ್ವಾಮಿ, ಹೌ
ದು.ನೀವು ಕಳಿಸಿದಿರಲ್ಲ ಒಂದು ಮೋಡ.
ರಾಮಗಿರಿಯಿಂದ ಅಲಕಾವತಿಯ ಯಕ್ಷಿ
ಣಿಗೆ, ಆ ಕುರಿತೆ ಒಂದಷ್ಟು ತಮ್ಮ ಕೂಡ
ಭಿನ್ನವಿಸಲೆಂದು ಬಂದದ್ದು ನಾವಿಬ್ಬರೂ,
ಬಾಯೊಣಗಿ ನಿಂತಿಹುದು ನಮ್ಮ ಪಯರು
ಹನಿ ನೀರಿಲ್ಲದೆ. ಮೋಡಕ್ಕೆ ಹೇಳುವಿರೆ ..... ?
''ದಾರಿಯಲ್ಲಿವರಿಗೂ, ನೀರು ಸುರಿಸು''.

II. ಇವುಗಳಲ್ಲಿ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : (3×5=15)

1) ಅಶ್ವತ್ಥಾಮ ರಾಜ್ಯಲಕ್ಷ್ಮಿಯನ್ನು ಭೇಟಿಮಾಡುವ ಪ್ರಸಂಗ.

2) 'ಇಬ್ಬರು ರೈತರು' ಕವನದ ಆಶಯ.

3) ಬಿಜ್ಜಳ ಮತ್ತು ಬಸವಣ್ಣನವರ ನಡುವೆ ನಡೆದ ಸಂಭಾಷಣೆ.

4) ತಿಪ್ಪಗಿಶಿವಣ್ಣನ ಮನೆಯಲ್ಲಿ ಕೆಲಸಕ್ಕೆ ಸೇರಿದ ಹಿನ್ನಲೆ.

5) ಕುಮಾರವ್ಯಾಸನ ಕಾವ್ಯದಲ್ಲಿ ಚಿತ್ರಿತಗೊಂಡಿರುವ ದ್ರೌಪದಿ ಪಾತ್ರದ ಬಗ್ಗೆ ಲೇಖಕಿಯ ಅಭಿಪ್ರಾಯ.

P.T.O.

III. ಇವುಗಳಲ್ಲಿ **ಮೂರು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(3×12=36)**

1) ಭೀಮನ ಗದಾಪ್ರಹಾರದಿಂದ ತೊಡೆಮುರಿದು ಬಿದ್ದಿದ್ದ ದುರ್ಯೋಧನನನ್ನು ಕಂಡ ಅಶ್ವತ್ಥಾಮನ ಪ್ರತಿಕ್ರಿಯೆಯೇನು ?

2) ಬಸವಣ್ಣ ಮತ್ತು ಜಗದೇವರ ನಡುವೆ ನಡೆದ ಸಂಭಾಷಣೆಯನ್ನು ಬರೆಯಿರಿ.

3) ತಿಪ್ಪಗಿಕ್ಷಣದಿಂದ ವಂಚಿತನಾದ ಬಗೆ ''ಕಳ್ಳುಬಳ್ಳಿ'' ಕಥೆಯಲ್ಲಿ ಹೇಗೆ ಮೂಡಿ ಬಂದಿದೆ ವಿವರಿಸಿ.

4) ಭಾರತೀಯ ಸಂಸ್ಕೃತಿ ಕುರಿತಂತೆ ಕಾರಂತರ ಅಭಿಪ್ರಾಯಗಳನ್ನು ವಿವರಿಸಿ.

5) ದ್ರೌಪದಿ ಮತ್ತು ಸೀತೆಯರ ಬಗ್ಗೆ ಲೇಖಕಿಯ ಅಭಿಪ್ರಾಯಗಳೇನು ? ಚರ್ಚಿಸಿ.

ಭಾಗ – 2

ವ್ಯಾವಹಾರಿಕ ಕನ್ನಡ

I. **ಮೂರಕ್ಕೆ** ಸಂಕ್ಷಿಪ್ತ ಉತ್ತರ ಬರೆಯಿರಿ : **(3×5=15)**

1) ಬದಲಾಗುತ್ತಿರುವ ಕನ್ನಡ ಭಾಷೆ.

2) ಸಂಕ್ಷೇಪ ಲೇಖನ.

3) ಒಳ ವಿಳಾಸ.

4) ಪರಿಪತ್ರ.

5) ವಾಚಕರ ವಾಣಿ.

II. ಈ ಗದ್ಯ ಭಾಗವನ್ನು ಸಂಕ್ಷಿಪ್ತಗೊಳಿಸಿ ಶೀರ್ಷಿಕೆಯನ್ನು ಬರೆಯಿರಿ : **(1×5=5)**

ಆತ್ಮಸಂಪತ್ತು ಹೇಗೆ ಯಮ ನಿಯಮ ಪ್ರತ್ಯಾಹಾರ ಪ್ರಾಣಾಯಾಮಾದಿಗಳಿಂದ ಬೆಳೆಯುತ್ತದೆಯೋ ಹಾಗೆಯೇ ಹಣದಿಂದಲೂ ಬೆಳೆಯುತ್ತದೆ. ಇದಕ್ಕೆ ಉದಾಹರಣೆಯಾಗಿ ರಾಮಕೃಷ್ಣ ಪರಮಹಂಸರು ಹೇಳಿದ ಈ ಕಥೆ ತೆಗೆದುಕೊಳ್ಳಿ. ಒಬ್ಬ ಹಠಯೋಗಿ ತನ್ನ ಯೋಗ ಶಕ್ತಿಯನ್ನು ತೋರಿಸಬೇಕೆಂದು ನೀರಿನ ಮೇಲೆ ಇಲ್ಲಿಂದ ಅಲ್ಲಿಗೆ ನಡೆದುಕೊಂಡು ಬಂದನಂತೆ. ರಾಮಕೃಷ್ಣರು ಅಲ್ಲಿದ್ದ ಅಂಬಿಗನಿಗೆ ಮೂರು ಕಾಸುಕೊಟ್ಟು ಆ ಯೋಗಿ ನಡೆದು ಬಂದ ದೂರವನ್ನು ತೆಪ್ಪದಲ್ಲಿ ತೇಲಿಬಂದು ''ನಿನ್ನ ಯೋಗದ ಬೆಲೆ ಇಷ್ಟು'' ಎಂದರಂತೆ. ಈ ಕಥೆಯನ್ನು ಓದಿದ ಮೇಲಂತೂ ನನಗೆ ನಿಜವಾಗಿ ಹಣದ ಮೇಲಿನ ಗೌರವ ಹೆಚ್ಚಿದೆ. ಮೂರು ಕಾಸಿಗೆ ಇಷ್ಟು ಯೋಗ ಶಕ್ತಿ ಇರಬೇಕಾದರೆ ಸವರನ್‌ಗಳ ಯೋಗ ಬಲಮಾನವೆಷ್ಟಿರಬಹುದು ? ಅಷ್ಟೇಕೆ ; ಮಗುವಿನ ಕೈಯಲ್ಲಿ ಮೂರು ಕಾಸು ಕೊಡಿ,

ಅದು ಅಳು ನಿಲ್ಲಿಸುತ್ತದೋ ಇಲ್ಲವೋ ನೋಡಿ. ಅದಕ್ಕೆ ಪೂರ್ವಭಾವಿಯಾಗಿ ನೀವು ಆಡುವ ಮಾತು, ತೋರುವ ಪ್ರೇಮ, ಮಾಡುವ ಮುದ್ದು, ಇವು ಎಲ್ಲಾ ಆ ಮೂರು ಕಾಸಿನ ಮುಂದೆ ನಿಷ್ಫಲ. ಮಗುವಿನ ಅಳುವನ್ನು ಕೂಡಾ ನಿಲ್ಲಿಸುವ ಶಕ್ತಿ ಹಣಕ್ಕಿದೆ ಎಂದ ಮೇಲೆ, ಅದರ ಗುಣವನ್ನು ಇನ್ನೆಷ್ಟು ಹೊಗಳೋಣ.

III. **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2×12=24)**

1) ವ್ಯವಹಾರ ಪತ್ರ ಎಂದರೇನು ? ಅದರ ಸ್ವರೂಪವನ್ನು ಮಾದರಿಯೊಂದಿಗೆ ವಿವರಿಸಿ.

2) ಪ್ರತ್ಯುತ್ತರ ಪತ್ರ ಎಂದರೇನು ? ಪ್ರತ್ಯುತ್ತರ ಪತ್ರದ ಮಾದರಿಯನ್ನು ಬರೆಯಿರಿ.

3) ಕಾಲೇಜಿನ ಶುಲ್ಕವನ್ನು ಕಂತುಗಳಲ್ಲಿ ಪಾವತಿ ಮಾಡುವುದಕ್ಕೆ ಸಂಬಂಧಿಸಿದಂತೆ ಪ್ರಾಂಶುಪಾಲರಿಗೆ ಮಾದರಿ ಪತ್ರವೊಂದನ್ನು ಬರೆಯಿರಿ.

4) ತಾವು ವಾಸವಾಗಿರುವ ಬಡಾವಣೆಯಲ್ಲಿ ರಸ್ತೆಗಳು ಹಾಳಾಗಿರುವುದರ ಬಗ್ಗೆ, ಪತ್ರಿಕೆಯ ಕುಂದುಕೊರತೆಗಳ ವಿಭಾಗಕ್ಕೆ ಪತ್ರವೊಂದನ್ನು ಬರೆಯಿರಿ.